ಕರಾಸಕೈಅನಿನಿ


**ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

**ನೊಂದಾಯಿತ ಕಛೇರಿ :** ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು -560 010

**ಫೋನ್ : 23407011 ರಿಂದ 25 ಫ್ಯಾಕ್ಸ್ : 91-080-23143566 / 23389070 ತಂತಿ : ಮೈಸ್ಮಾಲ್ ಕಾರ್ಪ**

**ಇ-ಮೇಲ್ :** kssidcho@vsnl.com ವೆಬ್‌ಸೈಟ್ : www.kssidc.co.in


ಸಂಖ್ಯೆ: ಸಮನ್ವಯ:ಕೈವ:ಮಳಿಗೆ:ನಿವೇಶನ:ಕರಾರು ಅವಧಿ:ಹಂಚಿಕೆ:2017 2056 ದಿನಾಂಕ: 06-09-2017

## ಕಛೇರಿ ಆದೇಶ

ವಿಷಯ : ಕೆ.ಐ.ಎ.ಡಿ.ಬಿ ಮತ್ತು ಕೆ.ಎಸ್.ಎಸ್.ಐ.ಡಿ.ಸಿಯ ನಿವೇಶನ/ಮಳಿಗೆಗಳ ಹಂಚಿಕೆ ಕಾರ್ಯನೀತಿಗೆ ತಿದ್ದುಪಡಿಗಳಿಗೆ ಅನುಮೋದನೆ ಬಗ್ಗೆ. – ನಿಗಮದಿಂದ ಹಂಚಿಕೆ ಮಾಡಲಾಗುವ ಮಳಿಗೆ/ಫ್ಲ್ಯಾಟ್ಸ್/ಗೋದಾಮು/ಅಂಗಡಿ ಹಾಗೂ ನಿವೇಶನಗಳನ್ನು 10 ವರ್ಷಗಳ ಗುತ್ತಿಗೆ ಕ್ರಯ ಮಾರಾಟ ಆಧಾರದ ಮೇಲೆ (Lease cum Sale basis) ಹಂಚಿಕೆ ಮಾಡುವ ಕುರಿತು.

ಉಲ್ಲೇಖ :
1) ಸರ್ಕಾರಿ ಆದೇಶ ಸಂಖ್ಯೆ./ಸಿಐ/511/ಎಸ್‌ಪಿಕ್ಯೂ/2013 ದಿನಾಂಕ: 07.08.2014.
2) ಸರ್ಕಾರಿ ಆದೇಶ ಸಂಖ್ಯೆ/ಸಿಐ/58/ಎಸ್‌ಪಿಐ/2013 ದಿನಾಂಕ 01.10.2014.
3) ದಿನಾಂಕ 26.12.2014 ರ ನಿಗಮದ 332ನೇ ಆಡಳಿತ ಮಂಡಳಿ ಸಭೆ ನಡವಳಿಗಳು.
4) ಕಛೇರಿ ಆದೇಶ ಸಂಖ್ಯೆ./ಸಮನ್ವಯ/ಮನಿ ದೀರ್ಘಾವಧಿ/ಹಂಚಿಕೆ ವರದಿ/2015/ 5478 ದಿನಾಂಕ 10.02.2015.
5) ದಿನಾಂಕ 14.01.2016 ರ ನಿಗಮದ 337ನೇ ಆಡಳಿತ ಮಂಡಳಿ ಸಭೆ ನಡವಳಿಗಳು.
6) ಸರ್ಕಾರಿ ಆದೇಶ ಸಂಖೆ/ಸಿಐ:105:ಎಸ್‌ಪಿಐ:2017 ದಿನಾಂಕ 11.07.2017

* * * * *

**ಪ್ರಸ್ತಾವನೆ :**

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಮಂಡಳಿಯು ಕಾಲಕಾಲಕ್ಕೆ ಹಂಚಿಕೆಯ ಷರತ್ತು ಮತ್ತು ನಿಬಂಧನೆಗಳ ಕಾರ್ಯನೀತಿಗಳು, ಗುತ್ತಿಗೆ ಕಾಲಾವಧಿ, ಮೂಲಸೌಕರ್ಯಗಳ ದರ, ಕೈಗಾರಿಕಾ ವಸಾಹತುಗಳ ವರ್ಗೀಕರಣ, ನಿರ್ಗಮನ ನೀತಿ, ಕ್ರಯಪತ್ರಗಳ ನಿರ್ವಹಣೆ ಮತ್ತು ಕೈಗಾರಿಕಾ ವಸಾಹತು ನಿರ್ವಹಣೆಗೆ ಸಂಬಂಧಪಟ್ಟಂತೆ ನಿಗಮದಿಂದ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿಗೆ ಮಳಿಗೆ, ನಿವೇಶನ, ಗೋದಾಮು ಮತ್ತು ಪ್ಲ್ಯಾಟ್ಸ್ ಹಂಚಿಕೆ ಸಂಬಂಧ ಕಾರ್ಯನೀತಿಗಳನ್ನು ರೂಪಿಸುತ್ತಿತ್ತು. ಮಂಡಳಿಯಿಂದ ಅನುಮೋದಿಸಲ್ಪಡುತಿದ್ದಂತೆ ಮತ್ತು ರೂಪಿಸಲ್ಪಟ್ಟ ಮಾರ್ಗಸೂಚಿಗಳನ್ವಯ ಹಂಚಿಕೆಯ ಕಾಲಾವಧಿಯ ಬಗ್ಗೆ ಮಂಡಳಿ ನಿರ್ಧಾರದಂತೆ ಸಣ್ಣ ಪ್ರಮಾಣ ಕೈಗಾರಿಕಾ ಘಟಕಗಳಿಗೆ ಕಂತು-ಖರೀದಿ ಆಧಾರದ ಮೇಲೆ ಹಂಚಿಕೆಗಳನ್ನು ಮಾಡಲಾಗುತ್ತಿತ್ತು ಮತ್ತು ಕ್ರಯಪತ್ರಗಳನ್ನು ನಿರ್ವಹಿಸಿಕೊಡಲಾಗುತ್ತಿತ್ತು.

ಕೈಗಾರಿಕಾ ವಸಾಹತು ನಿರ್ವಹಣೆಗಳಿಗೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸಲ್ಪಡುವ ಕಾರ್ಯನೀತಿಗಳು, ಮಾರ್ಗಸೂಚಿಗಳು, ಸುತ್ತೋಲೆಗಳು ಇತ್ಯಾದಿಗಳು ನಿಗಮದ ಆಡಳಿತ ಮಂಡಳಿಯ ಸಭೆಯ ಮುಂದೆ ಮಂಡಿಸಲ್ಪಡುತ್ತಿದ್ದವು. ಮಂಡಳಿಯು ಹಂಚಿಕೆ ಪ್ರಕ್ರಿಯೆಯಿಂದ ಕ್ರಯಪತ್ರದವರೆಗಿನ ಕಾರ್ಯವಿಧಾನವನ್ನು ಸರ್ಕಾರದ ನಿರ್ದೇಶನಗಳ ಸೇರ್ಪಡೆಗಳೊಂದಿಗೆ, ಸೇರ್ಪಡೆಗಳಿಲ್ಲದೆ ಹಾಗೂ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡು ಅಳವಡಿಸಿಕೊಳ್ಳುತ್ತಿತ್ತು.

ದಿನಾಂಕ 01.10.2014ರ ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರ ನಿರ್ಣಯವು ಪ್ರಪ್ರಥಮ ಬಾರಿಗೆ ಕೆ.ಎಸ್.ಎಸ್.ಐ.ಡಿ.ಸಿ.ಯು, ನಿಗಮದಿಂದ ಅಭಿವೃದ್ಧಿಪಡಿಸುವ ಎಲ್ಲಾ ಮಳಿಗೆ/ನಿವೇಶನ/ಗೋದಾಮು/ಫ್ಲ್ಯಾಟ್ಸ್/ಅಂಗಡಿ ಹಾಗೂ ಇತರೆ ಹಂಚಿಕೆಗಳನ್ನು ಕಡ್ಡಾಯವಾಗಿ 99 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವಂತೆ ಷರತ್ತು ವಿಧಿಸಿದೆ. ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19 ರಲ್ಲಿ 99 ವರ್ಷಗಳ ಗುತ್ತಿಗೆ ಸಂಬಂಧ ನೀಡಿರುವ ಮಾರ್ಗಸೂಚಿಗಳನ್ನು, ಅವುಗಳನ್ನೇ ಉಚಿತ ವ್ಯತ್ಯಾಸಗಳೊಂದಿಗೆ (mutatis-mutandis) ಅಳವಡಿಸಿಕೊಳ್ಳುವ ಬಗ್ಗೆ ಮಂಡಳಿಯ ಮುಂದೆ ತರಲು ನಿರ್ಧರಿಸಲಾಯಿತು ಹಾಗೂ ಅದರನ್ವಯ ಅಳವಡಿಸಿಕೊಳ್ಳಲಾಯಿತು ಮತ್ತು ಹಂಚಿಕೆಗಳನ್ನು ಮಾಡಲಾಯಿತು.

ಸರ್ಕಾರದ ಆದೇಶವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ, ಕೆ.ಎಸ್.ಎಸ್.ಐ.ಡಿ.ಸಿ ಯಿಂದ ಹಂಚಿಕೆ ಮಾಡಲ್ಪಡುವ ಕೈಗಾರಿಕಾ ಮಳಿಗೆಗಳು/ನಿವೇಶಗಳು/ಫ್ಲ್ಯಾಟ್ಸ್‌ಗಳು/ಗೋದಾಮುಗಳು/ಅಂಗಡಿಗಳು ಇವುಗಳ ಹಂಚಿಕೆಯನ್ನು 99 ವರ್ಷಗಳ ಗುತ್ತಿಗೆ ಆಧಾರದಲ್ಲಿ ಹಂಚಿಕೆ ಮಾಡುವ ಬಗ್ಗೆ ಒಂದು ಕಾರ್ಯಸೂಚಿಯನ್ನು ದಿನಾಂಕ 26.12.2014 ರಂದು ಜರುಗಿದ ನಿಗಮದ 332ನೇ ಆಡಳಿತ ಮಂಡಳಿ ಸಭೆಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು.

ಮಂಡಳಿಯ ಅನುಮೋದನೆಯನ್ವಯ, ದಿನಾಂಕ 10.02.2015 ರಿಂದ ಹಾಗೂ ಈ ಬಗ್ಗೆ ಮುಂದಿನ ಆದೇಶದವರೆವಿಗೂ ಜಾರಿಯಲ್ಲಿರುವಂತೆ, ಇನ್ನು ಮುಂದೆ ಕೆ.ಎಸ್.ಎಸ್.ಐ.ಡಿ.ಸಿ ನಿಗಮದಿಂದ ಹಂಚಿಕೆ ಮಾಡಲ್ಪಡುವ ಕೈಗಾರಿಕಾ ಮಳಿಗೆಗಳು/ಫ್ಲ್ಯಾಟ್ಸ್‌ಗಳು/ಅಂಗಡಿಗಳು/ಗೋದಾಮುಗಳು ಮತ್ತು ನಿವೇಶನಗಳನ್ನು 99 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಆದೇಶಿಸಿ, ದಿನಾಂಕ 10.02.2015 ರಂದು ಕಛೇರಿ ಆದೇಶವನ್ನು ಹೊರಡಿಸಲಾಯಿತು.

99 ವರ್ಷಗಳ ಗುತ್ತಿಗೆ ಮೇಲಿನ ಹಂಚಿಕೆಗಳು, ನಿರ್ಗಮನ ನೀತಿ, ಘಟಕದ ಕಾರ್ಯಚರಣೆ ಹಾಗೂ ಕಾರ್ಯವಿಧಾನಗಳು ಮತ್ತು ಗುತ್ತಿಗೆ ನೀತಿ ಇತ್ಯಾದಿಗಳನ್ನು ರೂಪಿಸಿಕೊಳ್ಳುವ ಬಗ್ಗೆ ಸವಿವರವಾದ ಕಾರ್ಯನೀತಿ ದಾಖಲೆಯನ್ನು ರೂಪಿಸಿ ದಿನಾಂಕ 14.01.2016ರಂದು ಜರುಗಿದ ನಿಗಮದ 337ನೇ ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಲಾಗಿತ್ತು ಮತ್ತು ಮಂಡಳಿಯ ಅನುಮೋದನೆ ತದನಂತರದಲ್ಲಿ, ಅದನ್ನು ಸಮಗ್ರ ರೂಪದಲ್ಲಿ ತದನಂತರದ ಹಂಚಿಕೆಗಳಿಗೆ ಅನುಷ್ಠಾನಗೊಳಿಸಲಾಯಿತು.

ಕರ್ನಾಟಕ ಸರ್ಕಾರವು ಅನುಕ್ರಮವಾಗಿ, ದಿನಾಂಕ 07.08.2014ರ ಸರ್ಕಾರಿ ಆದೇಶಗಳ ಸಂಖ್ಯೆ: CI:511:SPQ:2013 ಹಾಗೂ 07.07.2015 ಮತ್ತು CI:15:SPQ:2017 ದಿನಾಂಕ 09.03.2017 ಕ್ಕೆ ಈ ಕೆಳಕಂಡಂತೆ ಸೇರ್ಪಡೆ ಮಾಡುವುದರೊಂದಿಗೆ ಉಲ್ಲೇಖ(1) ರಂತೆ "ತಿದ್ದೋಲೆ ಅದೇಶ"ವನ್ನು ಹೊರಡಿಸಿದ್ದು ದಿನಾಂಕ 09.03.2017 ರ ಸರ್ಕಾರಿ ಆದೇಶದ ಕ್ರಮಾಂಕ 9ರ ಸೇರ್ಪಡೆ ವಿವರಗಳು ಕೆಳಕಂಡಂತಿವೆ.

ವಿವರಗಳು:

1) **ದಿನಾಂಕ 09.03.2017 ರ ಸರ್ಕಾರಿ ಆದೇಶ ಸಂಖ್ಯೆ: CI:511:SPQ:2017 ಕ್ಕೆ ಕೆಳಕಂಡಂತೆ ಸೇರ್ಪಡೆ ಮಾಡುವುದು.**

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಅದರ ಕೈಗಾರಿಕಾ ವಸಾಹತುಗಳಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ 2 ಎಕರೆವರೆಗಿನ ನಿವೇಶನ/ಮಳಿಗೆಗಳನ್ನು ಗುತ್ತಿಗೆ-ಕ್ರಯ ಆಧಾರದ ಮೇಲಿನ ಹಂಚಿಕೆಗೆ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

2) **ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ 2 ಎಕರೆವರೆಗಿನ ಹಂಚಿಕೆ ಪ್ರಕರಣಗಳಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು**

- ಗುತ್ತಿಗೆ-ಕ್ರಯ ಆಧಾರ ಅವಧಿಯನ್ನು 10 ವರ್ಷಗಳ ಅವಧಿಗೆ ನಿಗದಿಪಡಿಸುವುದು ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸಿದ್ದರೂ ಹಾಗೂ ಹಂಚಿಕೆಯಾದ ಜಾಗದ ಶೇಕಡಾ 50 ರಷ್ಟು ಕಟ್ಟಡಗಳಿಗೆ ಉಪಯೋಗಿಸಬೇಕು ಮತ್ತು ಅದಕ್ಕಿಂತ ಹೆಚ್ಚಿನ ಜಾಗವನ್ನು ಉಪಯೋಗಿಸಿದ್ದರೂ ಸಹ, ಗುತ್ತಿಗೆ ಕ್ರಯ ಕರಾರುಪತ್ರವನ್ನು ನಿರ್ವಹಿಸಿದ ದಿನಾಂಕದಿಂದ 10 ವರ್ಷಗಳು ಮುಕ್ತಾಯಗೊಳ್ಳುವ ಮುನ್ನ ಕ್ರಯ ಪತ್ರವನ್ನು ನಿರ್ವಹಿಸುವಂತಿಲ್ಲ.
- ನಿಚ್ಛಳ ಕ್ರಯಪತ್ರ (Absolute Sale Deed) ನೀಡುವ ಮುನ್ನ ಉದ್ಯಮಗಳು ಎಲ್ಲಾ ಬಾಕಿ ಮೊಬಲಗುಗಳನ್ನು ಚುಕ್ತಾ ಮಾಡಿರಲೇಬೇಕು. ಕ್ರಯಪತ್ರ ನೀಡಿದ ನಂತರದಲ್ಲಿ ನಿವೇಶನ/ಮಳಿಗೆಯನ್ನು ಕೈಗಾರಿಕಾ ಉದ್ದೇಶಗಳಿಗೇ ಉಪಯೋಗಿಸತಕ್ಕದ್ದು.
- ಎಂ.ಎಸ್.ಎಂ.ಇ.ಡಿ ಕಾಯ್ದೆ 2006ರ ಅನ್ವಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ.

(ರೂ. ಲಕ್ಷಗಳಲ್ಲಿ)

| ಉದ್ಯಮಗಳು | ಉತ್ಪಾದನಾ ಉದ್ಯಮಗಳು | ಸೇವಾ ಉದ್ಯಮಗಳು |
|---|---|---|
| | ಸ್ಥಾವರ ಮತ್ತು ಯಂತ್ರಗಳ ಮೇಲಿನ ಬಂಡವಾಳ ಹೂಡಿಕೆ | ಸಾಧನ ಸಾಮಾಗ್ರಿಗಳ ಮೇಲಿನ ಬಂಡವಾಳ ಹೂಡಿಕೆ |
| ಸೂಕ್ಷ್ಮ | ರೂ. 25 ಲಕ್ಷಗಳವರೆಗೆ | ರೂ. 10 ಲಕ್ಷಗಳವರೆಗೆ |
| ಸಣ್ಣ | ರೂ. 25-500 ಲಕ್ಷಗಳವರೆಗೆ | ರೂ. 10-200 ಲಕ್ಷಗಳವರೆಗೆ |
| ಮಧ್ಯಮ | ರೂ. 500-1000 [illegible] | |

ಮೇಲೆ ತಿಳಿಸಿರುವ ವ್ಯಾಖ್ಯಾನಗಳಿಗೆ ಭಾರತ ಸರ್ಕಾರವು ಯಾವಾಗಲಾದರೂ ಬದಲಾವಣೆಗಳನ್ನು ಮಾಡಿದಲ್ಲಿ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಮೇಲಿನ ವ್ಯಾಖ್ಯಾನವು ತಂತಾನೇ ಪರಿಷ್ಕೃತಗೊಳ್ಳುತ್ತದೆ.

- ಈ ಕಾರ್ಯನೀತಿಯು ಕೇವಲ ಎಂ.ಎಸ್.ಎಂ.ಇ.ಡಿ ಕಾಯ್ದೆ 2006ರ ಅಡಿಯಲ್ಲಿ ನೊಂದಣಿಯಾಗಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಮಾತ್ರ ಅನ್ವಯವಾಗುತ್ತದೆ ಮತ್ತು ಇತರೇ ಘಟಕಗಳಿಗೆ ಗುತ್ತಿಗೆ ಅವಧಿಯು 99 ವರ್ಷಗಳಾಗಿರುತ್ತದೆ.
- ಈ ಉದ್ದೇಶಿತ ಕಾರ್ಯನೀತಿಯು, ಯಾವ ಯಾವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು 99 ವರ್ಷಗಳ ಗುತ್ತಿಗೆ ಅವಧಿಗೆ ಹಂಚಿಕೆ ಪತ್ರಗಳನ್ನು ಪಡೆದಿರುವುವೋ ಹಾಗೂ 99 ವರ್ಷಗಳ ಅವಧಿಗೆ ಕರಾರು ಡೀಡ್‌ನ್ನು ನಿರ್ವಹಿಸಿರುವುವೋ ಅವುಗಳಿಗೂ ಸಹ ಅನ್ವಯವಾಗುತ್ತದೆ.
- ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಯಾವುದೇ ಅಡ್ಡಿಗಳು/ಸಮಸ್ಯೆಗಳು ಸಂಭವಿಸಿದಲ್ಲಿ ಕೆ.ಐ.ಎ.ಡಿ.ಬಿ./ಕೆ.ಎಸ್.ಎಸ್.ಐ.ಡಿ.ಸಿ.ಯಿಂದ ಈ ಯೋಜನೆ ಅನುಷ್ಠಾನಕ್ಕಾಗಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅನುಮೋದನೆ ಪಡೆಯುವುದು.

ಮೇಲಿನ ಅಂಶಗಳ ಹಿನ್ನೆಯಲ್ಲಿ ಉಲ್ಲೇಖ(6) ರಲ್ಲಿನ ಸರ್ಕಾರಿ ಆದೇಶದಲ್ಲಿ ನೀಡಿರುವ ಆದೇಶಗಳು/ವಿಧಿಸಿರುವ ಮಾರ್ಗಸೂಚಿಗಳನ್ನು ನಿಗಮದಲ್ಲಿಯು ಸಹ ಉಚಿತ ವ್ಯತ್ಯಾಸಗಳೊಂದಿಗೆ (mutatis mutandis) ಅಳವಡಿಸಿಕೊಳ್ಳಲು ತೀರ್ಮಾನಿಸಲಾಗಿದ್ದು, ಅದರನ್ವಯ ಈ ಕೆಳಕಂಡಂತೆ ಆದೇಶಗಳನ್ನು ಹೊರಡಿಸಲಾಗಿದೆ.

## ಆ ದೇ ಶ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಅದರ ಕೈಗಾರಿಕಾ ವಸಾಹತುಗಳಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ 2 ಎಕರೆವರೆಗಿನ ನಿವೇಶನ / ಮಳಿಗೆ / ಗೋದಾಮು / ಅಂಗಡಿ / ಫ್ಯಾಟ್ಸ್‌ಗಳನ್ನು ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಮಾಡಲು ಆದೇಶಿಸಲಾಗಿದೆ.

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ 2 ಎಕರೆವರೆಗಿನ **ಹಂಚಿಕೆ ಪ್ರಕರಣಗಳಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು**

- ಗುತ್ತಿಗೆ-ಕ್ರಯ ಆಧಾರ ಅವಧಿಯನ್ನು 10 ವರ್ಷಗಳ ಅವಧಿಗೆ ನಿಗದಿಪಡಿಸಲಾಗಿದೆ ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸಿದ್ದರೂ ಹಾಗೂ ನಿಗಮದಿಂದ ಹಂಚಿಕೆಯಾದ ಜಾಗದ ಶೇಕಡಾ 50 ರಷ್ಟು ಕಟ್ಟಡಗಳಿಗೆ ಉಪಯೋಗಿಸತಕ್ಕದ್ದು ಮತ್ತು ಅದಕ್ಕಿಂತ ಹೆಚ್ಚಿನ ಜಾಗವನ್ನು ಉಪಯೋಗಿಸಿದ್ದರೂ ಸಹ, ಗುತ್ತಿಗೆ ಕ್ರಯ ಕರಾರುಪತ್ರವನ್ನು ನಿರ್ವಹಿಸಿದ ದಿನಾಂಕದಿಂದ 10 ವರ್ಷಗಳು ಮುಕ್ತಾಯಗೊಳ್ಳುವ ಮುನ್ನ ಕ್ರಯ ಪತ್ರವನ್ನು ನಿರ್ವಹಿಸಲಾಗುವುದಿಲ್ಲ ಮತ್ತು ಕೈಗಾರಿಕಾ ವಸಾಹತು ನಿರ್ವಹಣೆಗೆ ಸಂಬಂಧಿಸಿದಂತೆ ನಿಗಮದಿಂದ ಮಂಡಳಿಯಿಂದ ಈಗಾಗಲೇ ಅನುಮೋದನೆಗೊಂಡಿರುವ ಕಾರ್ಯನೀತಿಗಳನ್ನು ಅಳವಡಿಸಿಕೊಳ್ಳತಕ್ಕದ್ದು ಮತ್ತು ಜಾರಿಯಲ್ಲಿರತಕ್ಕದ್ದು.
- ನಿಗಮದಿಂದ ನಿಚ್ಚಳ ಕ್ರಯಪತ್ರ (Absolute Sale Deed) ನೀಡುವ ಮುನ್ನ ಉದ್ಯಮಗಳು ಎಲ್ಲಾ ವಿವಿಧ ಬಾಕಿ ಮೊಬಲಗುಗಳನ್ನು ಚುಕ್ತಾ ಮಾಡಿರತಕ್ಕದ್ದು ಹಾಗೂ ಕ್ರಯಪತ್ರ ನೀಡಿದ ತದನಂತರದಲ್ಲಿ ನಿವೇಶನ/ಮಳಿಗೆ/ಗೋದಾಮು/ಅಂಗಡಿ/ಫ್ಲ್ಯಾಟ್ಸ್ ಗಳನ್ನು ಕೈಗಾರಿಕಾ ಉದ್ದೇಶಗಳಿಗೆ ಮಾತ್ರವೇ ಉಪಯೋಗಿಸತಕ್ಕದ್ದು.
- ಎಂ.ಎಸ್.ಎಂ.ಇ.ಡಿ ಕಾಯ್ದೆ 2006ರ ಅನ್ವಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ.

(ರೂ. ಲಕ್ಷಗಳಲ್ಲಿ)

| ಉದ್ಯಮಗಳು | ಉತ್ಪಾದನಾ ಉದ್ಯಮಗಳು | ಸೇವಾ ಉದ್ಯಮಗಳು |
|---|---|---|
| | ಸ್ಥಾವರ ಮತ್ತು ಯಂತ್ರಗಳ ಮೇಲಿನ ಬಂಡವಾಳ ಹೂಡಿಕೆ | ಸಾಧನ ಸಾಮಾಗ್ರಿಗಳ ಮೇಲಿನ ಬಂಡವಾಳ ಹೂಡಿಕೆ |
| ಸೂಕ್ಷ್ಮ | ರೂ. 25 ಲಕ್ಷಗಳವರೆಗೆ | ರೂ. 10 ಲಕ್ಷಗಳವರೆಗೆ |
| ಸಣ್ಣ | ರೂ. 25-500 ಲಕ್ಷಗಳವರೆಗೆ | ರೂ. 10-200 ಲಕ್ಷಗಳವರೆಗೆ |
| ಮಧ್ಯಮ | ರೂ. 500-1000 ಲಕ್ಷಗಳವರೆಗೆ | ರೂ. 200-500 ಲಕ್ಷಗಳವರೆಗೆ |

ಮೇಲೆ ತಿಳಿಸಿರುವ ವ್ಯಾಖ್ಯಾನಗಳಿಗೆ ಭಾರತ ಸರ್ಕಾರವು ಯಾವಾಗಲಾದರೂ ಬದಲಾವಣೆಗಳನ್ನು ಮಾಡಿದಲ್ಲಿ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಮೇಲಿನ ವ್ಯಾಖ್ಯಾನವು ತಂತಾನೇ ಪರಿಷ್ಕೃತಗೊಳ್ಳುತ್ತದೆ.

- ಈ ಕಾರ್ಯನೀತಿಯು ಕೇವಲ ಎಂ.ಎಸ್.ಎಂ.ಇ.ಡಿ ಕಾಯ್ದೆ 2006ರ ಅಡಿಯಲ್ಲಿ ನೊಂದಣಿಯಾಗಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಮಾತ್ರ ಅನ್ವಯವಾಗುತ್ತದೆ ಮತ್ತು ಇತರೇ ಘಟಕಗಳಿಗೆ ಗುತ್ತಿಗೆ ಅವಧಿಯು 99 ವರ್ಷಗಳಾಗಿರುತ್ತದೆ.
- ಈ ಉದ್ದೇಶಿತ ಕಾರ್ಯನೀತಿಯು, ಯಾವ ಯಾವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು 99 ವರ್ಷಗಳ ಗುತ್ತಿಗೆ ಅವಧಿಗೆ ನಿಗಮದಿಂದ ಹಂಚಿಕೆ ಪತ್ರಗಳನ್ನು ಪಡೆದಿರುವುವೋ ಹಾಗೂ 99 ವರ್ಷಗಳ ಅವಧಿಗೆ ಗುತ್ತಿಗೆಪತ್ರ (Lease Deed) ಅನ್ನು ನಿರ್ವಹಿಸಿರುವುವೋ ಅವುಗಳಿಗೂ ಸಹ ಅನ್ವಯವಾಗುತ್ತದೆ.

ಈ ಹಿಂದೆ 10 ವರ್ಷಗಳ ಗುತ್ತಿಗೆ ಅವಧಿಗೆ ಸಂಬಂಧಿಸಿದಂತೆ ಹೊರಡಿಸಲ್ಪಟ್ಟಿದ್ದ ನಿಗಮದ ಆದೇಶದಲ್ಲಿ ನಿಗದಿಪಡಿಸಲಾಗಿದ್ದ ಅದೇ ಸೌಲಭ್ಯಗಳನ್ನು ವಿಸ್ತರಿಸುವುದರೊಂದಿಗೆ, ಪ್ರಸ್ತುತ 10 ವರ್ಷಗಳ ಗುತ್ತಿಗೆ ಅವಧಿಯನ್ನು ಈಗಾಗಲೇ ದಿನಾಂಕ 01.10.2014 ರಿಂದ ಈವರೆವಿಗೂ ನಿಗಮದಿಂದ 99 ವರ್ಷಗಳ ದೀರ್ಘಕಾಲದ ಗುತ್ತಿಗೆ ಕರಾರು ಅವಧಿ ಮೇಲೆ ಹಂಚಿಕೆ ಮಾಡಿರುವ ಎಲ್ಲಾ ಹಂಚಿಕೆದಾರರುಗಳಿಗೂ ಸಹ **ಪೂರ್ವಾನ್ವಯವಾಗುವಂತೆ** ಅನ್ವಯಿಸತಕ್ಕದ್ದು ಹಾಗೂ ತದನುಸಾರವಾಗಿ ಕ್ರಯ ಪತ್ರಗಳನ್ನು ನಿರ್ವಹಿಸಿಕೊಡಲು ಆದೇಶಿಸಿದೆ.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಹಾಗೂ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು. ಈ ಆದೇಶವು ತತ್‌ಕ್ಷಣದಿಂದ ಹಾಗೂ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ಹರಿಹರ/ ಮಂಗಳೂರು/ ವಿಜಯಪುರ/ ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ) / (ಆಡಳಿತ, ಭೂಸ್ವಾಧೀನ & ವಾಣಿಜ್ಯ),/(ಸಮನ್ವಯ&ಸಾ.ಸಂ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಆ.ಲೆ.ಪ)/ವಲಯ-1/ವಲಯ-2, ಕರಾಸಕೈಅನಿನಿ, ಬೆಂಗಳೂರು / ಹುಬ್ಬಳ್ಳಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು(ವ&ಕಾಲೆ) / (ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ವ್ಯವಸ್ಥಾಪಕರು(ಇಡಿಪಿ), ಕರಾಸಕೈಅನಿನಿ, ಬೆಂಗಳೂರು ಮಾಹಿತಿಗೆ ಮತ್ತು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.